ವಿಷಯ: ಮದ್ದೂರು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಹತ್ತಿರ ಕಟ್ಟಡಗಳ ನಿರ್ಮಾಣ.

2751 (4071)

ಶ್ರೀ ಎಂ.ಮಹೇಶ್ ಚಂದ್ (ಮದ್ದೂರ್): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮದ್ದೂರು ಪಟ್ಟಣದ ಕೆ.ಎಸ್.ಆರ್.ಟಿ.ಸಿ.ಬಸ್‌ನಿಲ್ದಾಣದ ಹತ್ತಿರ ಕಟ್ಟಡಗಳು ನಿರ್ಮಾಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನಿಯಮಗಳನ್ನು ಉಲ್ಲಂಘಿಸಿ ರಸ್ತೆಗೆ ಜಾಗ ಬಿಡದೆ, ಕಟ್ಟಡ ನಿರ್ಮಿಸುತ್ತಿರುವುದು ನಿಜವಲ್ಲವೆ?

ಇ) ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗುತ್ತಿದೆ?

ಶ್ರೀ ಸಿ.ಎಂ.ಉದಾಸಿ.(ಲೋಕೋಪಯೋಗಿ ಸಚಿವರು):

ಅ) ಒಂದು ಪ್ರಕರಣವು ಗಮನಕ್ಕೆ ಬಂದಿದೆ.

ಆ) ನಿಜ.

ಇ) ರೆವೆನ್ಯೂ ಸರ್ವೆಯರ್ ರವರಿಂದ ಒತ್ತುವರಿಯ ವಿವರ ಪಡೆದು ನಿಯಮಗಳಂತೆ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ: ರಾಷ್ಟ್ರೀಯ ಕ್ರೀಡೆಗೆ ವೆಚ್ಚವಾದ ಮೊತ್ತ.

2752 (4068)

ಶ್ರೀ ಎಂ.ಮಹೇಶ್‌ಚಂದ್ (ಮದ್ದೂರ್): ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷ ಬೆಂಗಳೂರು ನಗರದಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಯಲ್ಲಿ ವೆಚ್ಚವಾದ ಮೊತ್ತವೆಷ್ಟು?

ಆ) ಇದರಲ್ಲಿ ರಾಜ್ಯ, ಹೊರರಾಜ್ಯಗಳು, ಕೇಂದ್ರ ಹಾಗೂ ಖಾಸಗಿ ಸಂಸ್ಥೆಗಳು ಹೂಡಿದ ಬಂಡವಾಳವೆಷ್ಟು?

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ

ಸಚಿವರು):

ಅ) ಇದುವರೆವಿಗೂ ರೂ. 115.85 ಕೋಟಿಗಳು, ಅಂತರ ರಾಷ್ಟ್ರೀಯ ಗುಣಮಟ್ಟದ ಕ್ರೀಡಾಂಗಣಗಳನ್ನು ನಿರ್ಮಾಣಿಸಲು ಮತ್ತು ರಾಷ್ಟ್ರೀಯ ಕ್ರೀಡೆಗಳನ್ನು ನಡೆಸಲು ವೆಚ್ಚ ಮಾಡಲಾಗಿದೆ.

ಆ) ಒಟ್ಟು ರೂ.65,72,84,000-00 ಗಳು ವಿವರ ಕೆಳಕಂಡಂತೆ ಇದೆ:

ಅ) ರಾಜ್ಯ ಸರ್ಕಾರದಿಂದ : 49,60,00,000.00

ಆ) ಕೇಂದ್ರ ಸರ್ಕಾರದಿಂದ : 9,50,00,000.00

ಇ) ಪ್ರಾಯೋಜಕರಿಂದ : 6,62,84,000.00

ವಿಷಯ: ಕುಣಿಗಲ್‌ನಲ್ಲಿ ಸಿವಿಲ್ ಜಡ್ಜ್ ನ್ಯಾಯಾಲಯ ಸ್ಥಾಪನೆ.

2754 (3914)

ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್): ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಣಿಗಲ್‌ನಲ್ಲಿ ಸಿವಿಲ್ ಜಡ್ಜ್ ನ್ಯಾಯಾಲಯದ (ಸೀನಿಯರ್ ಸಿವಿಲ್ ಜಡ್ಜ್) ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಯಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) ಕುಣಿಗಲ್ ವಕೀಲರ ಸಂಘದ ಅಧ್ಯಕ್ಷರಿಂದ ಕುಣಿಗಲ್‌ನಲ್ಲಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ (ಹಿ.ವಿಭಾಗ) ಸ್ಥಾಪನೆ ಮಾಡುವಂತೆ ಮನವಿ ಬಂದಿದ್ದು, ಈ ವಿಷಯವು ಕರ್ನಾಟಕ ಉಚ್ಚನ್ಯಾಯಾಲಯದ ಪರಿಶೀಲನೆಯಲ್ಲಿರುತ್ತದೆ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ: ರಾಜ್ಯದಲ್ಲಿ ಮುನ್ಸಿಫ್ ನ್ಯಾಯಾಲಯಗಳ ಸ್ಥಾಪನೆ

2755 (3915)